

ಮಕ್ಕಳಿಗೆ ಪ್ರೀತಿ ವ್ಯಕ್ತಪಡಿಸಲು ಪೋಷಕರು ಹಿಂಜರಿಯಬಾರದು. ಆದರೆ, ನಮ್ಮ ಪ್ರೀತಿ ಮಕ್ಕಳ ಬೆಳವಣಿಗೆಗೆ ಬೆಳಕಾಗಬೇಕೇ ಹೊರತು ಬೆಂಕಿಯಾಗಬಾರದು.

# ಐ ಲವ್ ಯು ಎನ್ನಲು ಜುಗ್ಗತನ ಬೇಡ

■ ಸ್ವಯಂಪ್ರಭಾ

ಮುದ್ದು ಮಾಡಿದರೆ ಮಕ್ಕಳು ಹಾಳಾಗುತ್ತಾರೆ ಎನ್ನುವುದು ಪೋಷಕವಲಯದಲ್ಲಿನ ಜನಪ್ರಿಯ ಮೂಢನಂಬಿಕೆಗಳಲ್ಲೊಂದು. ಪ್ರೀತಿಯಿಂದ ಮಕ್ಕಳ ಮನಸ್ಸು ಪ್ರಫುಲ್ಲಗೊಳ್ಳುತ್ತದೆ. ಹಿರಿಯರ ಪ್ರೀತಿ ಮಕ್ಕಳ ಪಾಲಿಗೆ ಆತ್ಮವಿಶ್ವಾಸದ ರೂಪದಲ್ಲಿ ಕಾಯುತ್ತದೆ. ಅದೇ ಮುದ್ದು ಕಡಿಮೆಯಾದಾಗ ಮಕ್ಕಳ ಮನಸ್ಸು ಮುದುಡುತ್ತದೆ, ಪೆಡುಸಾಗುತ್ತದೆ. ನೀರು ಕಡಿಮೆಯಾದ ಗಿಡದಂತೆ ಪ್ರೀತಿ ಕಡಿಮೆಯಾದ ಎಳೆಯರು ಬಿಳಿಚಿಕೊಳ್ಳುತ್ತಾರೆ.

ಮಕ್ಕಳು ಇರುವುದೇ ಪ್ರೀತಿ ಮಾಡಿಸಿಕೊಳ್ಳಲಿಕ್ಕೆ ಹಾಗೂ ಪ್ರೀತಿ ಮಾಡಲಿಕ್ಕೆ. ನಮ್ಮ ಬದುಕಿನಲ್ಲಿ ಪ್ರೀತಿಯ ರಾಯಭಾರಿಗಳ ಪಾತ್ರವನ್ನು ಚಿಣ್ಣರು ವಹಿಸುತ್ತಾರೆ. ಈ ಪಾತ್ರವನ್ನು ಕವಿ ಕೆ.ಎಸ್. ನರಸಿಂಹಸ್ವಾಮಿ ತಮ್ಮ 'ತುಂಗಭದ್ರೆ' ಕವಿತೆಯಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ. 'ತುಂಗಭದ್ರೆ ಹೊಳೆಯಲ್ಲ, ವರುಷದ ಮಗಳು' ಎಂದು ಶುರುವಾಗುವ ಪದ್ಯದಲ್ಲಿ. 'ನಾನೊಂದು ದಡ, ಅವಳೊಂದು ದಡ' ಎಂದು ಕವಿ ತಮ್ಮ ಸಂಸಾರವನ್ನು ಬಣ್ಣಿಸುತ್ತಾರೆ. ಆ ಎರಡು ದಡಗಳ ನಡುವೆ ಸಂಚರಿಸುವ ಹಾಯಿದೋಣಿ ಮಗಳು ಎನ್ನುತ್ತಾರೆ. ಎಂಥ ಸತ್ಯದ ಮಾತು? ಕಲ್ಪಿಸಿಕೊಳ್ಳಿ, ಮಕ್ಕಳೇ ಇಲ್ಲದಿದ್ದರೆ ನಮ್ಮೆಲ್ಲರ ಬದುಕು ಏನಾಗುತ್ತಿತ್ತು? ದಾಂಪತ್ಯದ ರುಚಿ ದೀರ್ಘಕಾಲ ಉಳಿಯುತ್ತಿತ್ತೆ? ಮಕ್ಕಳ ಗೈರುಹಾಜರಿಯಲ್ಲಿ ನಾಳೆಗಳ ಬಗ್ಗೆ ನಿರೀಕ್ಷೆ ಉಳಿಯುತ್ತಿತ್ತೆ? ಮಕ್ಕಳ ಬಗ್ಗೆ ಪ್ರೀತಿ ತೋರಿಸಲಿಕ್ಕೆ ಕೆಲವು ಪೋಷಕರು ಹಿಂದೆಮುಂದೆ ನೋಡಲಿಕ್ಕೆ, 'ಅತಿಯಾದ ಕಾಳಜಿಯಿಂದ ಮಕ್ಕಳು ಹಾಳಾಗುತ್ತಾರೆ' ಎನ್ನುವ ಆತಂಕವಷ್ಟೇ ಕಾರಣವಲ್ಲ; ಪ್ರೀತಿಯನ್ನು ಅಭಿವ್ಯಕ್ತಿಸಲಿಕ್ಕೆ ಮಾರ್ಗಗಳು ಗೊತ್ತಿಲ್ಲದಿರುವುದೂ ಹೌದು. ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದು ಹೇಳುವುದು ಅನೇಕರಿಗೆ ತಮ್ಮ ವ್ಯಕ್ತಿತ್ವಕ್ಕೆ ತಕ್ಕುದಲ್ಲ ಎನ್ನುವ ಭಾವನೆಯೂ ಇರುತ್ತದೆ. ಇಂಥ ಹುಸಿ ಗಾಂಭೀರ್ಯ ಬದುಕಿನ ಸಣ್ಣ ಪುಟ್ಟ ಖುಷಿಗಳಿಂದ ನಮ್ಮನ್ನು ವಂಚಿತರನ್ನಾಗಿಸುತ್ತದೆ. ಒಮ್ಮೆ ಮನಸ್ಸು ಬಿಚ್ಚಿ ಪ್ರೀತಿ ಹೇಳಿಕೊಂಡಾಗ ಉಂಟಾಗುವ ಖುಷಿ, ಹಗುರಭಾವಕ್ಕೆ ಬೆಲೆ ಕಟ್ಟುವುದು ಸಾಧ್ಯವಿಲ್ಲ.

ಪ್ರೀತಿಯನ್ನು ಅಭಿವ್ಯಕ್ತಿಸುವುದೆಂದರೆ, ಮಕ್ಕಳಿಗೆ ಪ್ರೀತಿಯ ಮಹತ್ವವನ್ನು ಅರ್ಥ ಮಾಡಿಸುವುದೂ ಹೌದು. ಏನದು ಮಹತ್ವ? ಅದು ಜವಾಬ್ದಾರಿಗೆ ಸಂಬಂಧಿಸಿದ್ದು. ಐ ಲವ್ ಯು ಎನ್ನುವ ಮಾತಿನ ಗಟ್ಟಿತನ ನಿಂತಿರುವುದು ಭಾವಾವೇಶದ ಮೇಲಲ್ಲ. ಅದು ಅನುದಿನದ ವಾಸ್ತವದ ಸವಾಲುಗಳನ್ನು ಎದುರಿಸಲು ಶಕ್ತಿ ನೀಡುವಂತಹದ್ದು. ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದರೆ, ನಿನ್ನ ಸಂಕಟದ ಕ್ಷಣಗಳಲ್ಲಿ ನಾನಿದ್ದೇನೆ ಎಂದು ಮಗುವಿಗೆ ಅಮ್ಮನೋ ಅಪ್ಪನೋ ನೀಡುವ ಅಭಯವೇ ಆಗಿದೆ. ಅಮ್ಮನ ಅಪ್ಪುಗೆಯಲ್ಲಿ ಮಗು ಸುರಕ್ಷತಾ ಭಾವನೆಯನ್ನು ಪಡೆಯುತ್ತದಲ್ಲ; ಅಂತಹ ಅನುಭವವನ್ನು 'ಲವ್ ಯು' ಎನ್ನುವ ಮಾತೂ ನೀಡುತ್ತದೆ. ನಮ್ಮನ್ನು ಪ್ರೀತಿಸುವವರು, ಕಾಳಜಿ ಮಾಡುವವರು ಇದ್ದಾರೆ ಎನ್ನುವ ನಂಬಿಕೆ ಸವಾಲುಗಳನ್ನು ಎದುರಿಸಲು ಶಕ್ತಿ ನೀಡುತ್ತದೆ.

ಪ್ರೀತಿ ಎನ್ನುವುದು ಅಮೃತ. ಕೆಲವೊಮ್ಮೆ ಅದು ವಿಷವಾಗುವುದೂ ಇದೆ. ಅದಕ್ಕೆ ಕಾರಣ ನಾವೇ ಆಗಿರುತ್ತೇವೆ. ಪ್ರೀತಿಯ ಹೆಸರಿನಲ್ಲಿ ತೋರುವ ಅತಿ ಕಾಳಜಿ ಮಕ್ಕಳಿಗೆ ಆತ್ಮವಿಶ್ವಾಸ ತುಂಬುವ ಬದಲು, ಭ್ರಮೆಗಳನ್ನು ಬಿತ್ತುತ್ತದೆ. ಪ್ರೀತಿ ಎನ್ನುವುದು ಲೌಕಿಕದ ಸುಖಗಳ ರೂಪ ಪಡೆಯುತ್ತಾ ಹೋದಹಾಗೆ, ಮಕ್ಕಳು ಬದುಕನ್ನು ಎದುರಿಸಲುಬೇಕಾದ ಶಕ್ತಿಯನ್ನೇ ಕಳೆದುಕೊಳ್ಳತೊಡಗುತ್ತಾರೆ. ಉದಾಹರಣೆಗೆ, ಮಕ್ಕಳು ಕೇಳಿದ್ದನ್ನೆಲ್ಲ ಕೊಡಿಸುವುದು. ಇದರಿಂದಾಗಿ ಮಕ್ಕಳಿಗೆ ವಸ್ತುವಿನ ಮೌಲ್ಯದ ಅರಿವೇ ತಿಳಿಯುವುದಿಲ್ಲ. ಬದುಕಿಗೆ ಯಾವುದು ಬೇಕು, ಯಾವುದು ಅನಗತ್ಯ ಎನ್ನುವ ವಿವೇಚನೆಯೂ ಉಳಿಯುವುದಿಲ್ಲ. ಅಂಥ ಅತಿ ಕಾಳಜಿ ತೋರುವುದರ ಬಗ್ಗೆ ಪೋಷಕರು ಎಚ್ಚರದಿಂದ ಇರಬೇಕು. ಸಾಲ ಮಾಡಿಯಾದರೂ ಮಕ್ಕಳ ಅಗತ್ಯಗಳನ್ನು ಪೂರೈಸುವ ಪೋಷಕರಿದ್ದಾರೆ. ಈ ನಿಟ್ಟಿನಲ್ಲಿ ವಿವೇಚನೆ ಅಗತ್ಯ. ಮಕ್ಕಳ ಮೇಲಿನ ಪ್ರೀತಿಯನ್ನು ಸಾಬೀತುಪಡಿಸಲಿಕ್ಕಾಗಿ ಪೋಷಕರು ಸಾಲಗಾರರಾಗುವುದು ಜಾಣ್ಮೆಯಲ್ಲ.

ಪ್ರೀತಿ ಮಕ್ಕಳಲ್ಲಿ ಆತ್ಮವಿಶ್ವಾಸದ ಜೊತೆಗೆ ಜವಾಬ್ದಾರಿಯನ್ನೂ ಹುಟ್ಟಿಸುವಂತಿರಬೇಕು. ತನ್ನನ್ನು ಅತೀವವಾಗಿ ಪ್ರೀತಿಸುವ ಅಪ್ಪ ಅಮ್ಮನ ಕಾಳಜಿಯ ಬಗ್ಗೆ ಮಗುವೂ ಯೋಚಿಸುವಂತಾಗಬೇಕು. ಮಕ್ಕಳು ತಪ್ಪು ಮಾಡದಂತೆ, ದಾರಿ ತಪ್ಪದಂತೆ ತಡೆಯುವ ಸಾಮರ್ಥ್ಯ ಹಿರಿಯರ ಪ್ರೀತಿಗಿದೆ. ಮಕ್ಕಳು ರಚನಾತ್ಮಕವಾಗಿ ಯೋಚಿಸುವ ಸಾಮರ್ಥ್ಯವನ್ನು ದೊಡ್ಡವರ ಪ್ರೀತಿ ಎಳೆಯರಲ್ಲಿ ಹುಟ್ಟಿಸುವಂತಿರಬೇಕು.

ಮಕ್ಕಳು ಕೇಳಿದ ತಿನಿಸನ್ನೋ ಬಟ್ಟೆಯನ್ನೋ ಮೊಬೈಲ್ ಫೋನನ್ನೋ ಕೊಡಿಸುವುದು ಪ್ರೀತಿಯ ನಡವಳಿಕೆಗಳೇ ಹೌದು. ಮಕ್ಕಳ ಭವಿಷ್ಯಕ್ಕಾಗಿ ಉಳಿತಾಯ ಮಾಡುವುದೂ ಪ್ರೀತಿಯ ಒಂದು ದಾರಿಯೇ. ಇವೆಲ್ಲಕ್ಕಿಂತಲೂ ಹೆಚ್ಚು ಮೌಲ್ಯಯುತವಾದುದು, ಮಕ್ಕಳ ಮನಸ್ಸನ್ನು ಹೆಚ್ಚು ಹೆಚ್ಚು ಮಾನವೀಯಗೊಳಿಸುವುದು; ವಸ್ತುಗಳಿಗಿಂತಲೂ ಸಂಬಂಧಗಳ ಬಗ್ಗೆ ಮಕ್ಕಳ ಮನಸ್ಸಿನಲ್ಲಿ ಹೆಚ್ಚಿನ ಪ್ರೀತಿ ಉಳಿಯುವುದು.

ಪ್ರೀತಿ ಇಲ್ಲದೆ ನಾನು ಏನನ್ನೂ ಮಾಡಲಾರೆ ಎನ್ನುತ್ತಾರೆ ಕವಿ ಚಂದ್ರಶೇಖರ ಪಾಟೀಲ. ಪ್ರೀತಿ ಇಲ್ಲದೆ ಮಕ್ಕಳನ್ನು ಬೆಳೆಸುವುದಂತೂ ಸಾಧ್ಯವೇ ಇಲ್ಲ.

ಪ್ರತಿಕ್ರಿಯಿಸಿ: feedback@sudha.co.in